**ದಿನಾಂಕಃ 28.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿ ವಾದಿ ಪರ ವಕೀಲರಿಂದಃ**

1. ದಾವೆಯ ಸಂಬಂಧ ಮಾಹಿತಿ ಇರುತ್ತದೆ. ಸದರಿ ದಾವೆಯನ್ನು ಸರೋಜಮ್ಮರವರು ಕೃಷ್ಣ ಇವರ ವಿರುದ್ದ ಹಾಕಿರುತ್ತಾರೆ. ನನ್ನ ಜಮೀನು ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಬರುತ್ತದೆ. ದಾವಾ ಆಸ್ತಿಯ ಸರ್ವೆ ನಂ.111/2 ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.111/2 ಸರೋಜಮ್ಮರವರ ಹೆಸರಿನಲ್ಲಿ ಯಾವಾಗ ಖಾತೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ಅದೇ ರೀತಿ ಖಾತೆ ಸದರಿಯವರ ಹೆಸರಿನಲ್ಲಿ ಯಾವಾಗ ವಜಾ ಆಗಿರುತ್ತದೆಂದು ಸಹ ಗೊತ್ತಿರುವುದಿಲ್ಲ ಎಂದರೆ ಸರಿ. ಸದರಿ ಜಮೀನು ಮೂಲತಃ ಪಡ ಬಿದ್ದಿದ್ದು ಎಂದರೆ ಸರಿ. ಸದರಿ ಜಮೀನನ್ನು ಪಡ restore ಮಾಡಿ ಪ್ರತಿವಾದಿಯ ಹೆಸರಿನಲ್ಲಿ ಅದು ಬರುತ್ತಿದೆ ಎಂದರೆ ಸಾಕ್ಷಿಯು ಪಡ ವಜಾ ಮಾಡಿದ ಮೇಲೆ ಕೈ ಪಹಣಿಯು ರಾಮಣ್ಣನವರ ಹೆಸರಿನಲ್ಲಿ ಬರುತ್ತಿತ್ತು ಎಂದು ನುಡಿಯುತ್ತಾರೆ. ದಿನಾಂಕ ಅಥವಾ ವರ್ಷ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.111/2 ರಲ್ಲಿ ಕೃಷ್ಣ ರವರನ್ನು ಹೊರತು ಪಡಿಸಿ ಬೇರೆ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

2. ಸದರಿ ಜಮೀನಿನಲ್ಲಿ ತೆಂಗಿನ ಮರ ಹಾಗೂ ಇತರೆ ಬೆಳೆಗಳನ್ನು ಪ್ರತಿವಾದಿ ಹಾಕಿರುತ್ತಾರೆಂದರೆ ಸಾಕ್ಷಿಯು ಅದು ಸರೋಜಮ್ಮರವರು ಹಾಕಿರುತ್ತಾರೆಂದು ನುಡಿಯುತ್ತಾರೆ. ನಾನು ವಾದಿಯ ಜೊತೆ ಚೆನ್ನಾಗಿರುವುದರಿಂದ ಅವರ ಪರ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ನಾವು ಅವರ ಜೊತೆ ಚೆನ್ನಾಗಿರುವುದು ಸರಿ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ವಾದಿ ಗಂಡ ಅಥವಾ ಮಾವ ರವರು ಕೊಂಡುಕೊಂಡ ಜಮೀನಲ್ಲ ಎಂದರೆ ಸರಿ. ಅದೇ ರೀತಿ ವಾದಿ ಹಾಗೂ ಅವರ ಕುಟುಂಬ ಹಿಂದಿನಿಂದಲೂ ಹಾಗೂ ಇಲ್ಲಿಯವರೆಗೂ ದಾವಾ ಆಸ್ತಿಯ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪಹಣಿ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ನಾನು ತಿಳಿದುಕೊಂಡಿಲ್ಲ. ನಾನು ಸದರಿ ದಾವೆಯಲ್ಲಿ ವಾದಿಯ ಚಿತಾವಣೆಯ ಮೇರೆಗೆ ಈ ರೀತಿ ಸುಳ್ಳು ಸಾಕ್ಷ್ಯವನ್ನು ನುಡಿಯಲು

ಬಂದಿರುತ್ತೇನೆಂದರೆ ಸರಿಯಲ್ಲ. ವಾದಿ ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆಂದರೆ ಸಾಕ್ಷಿಯು ವಾರಗಟ್ಟಲೇ ಬಂದು ಹೋಗುತ್ತಾರೆಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ಕೃಷ್ಣೇಗೌಡರು, ಪಶ್ಚಿಮಕ್ಕೆ ಕೊಡುಗೆ ಭೂಮಿ, ಉತ್ತರಕ್ಕೆ ರಾಮಣ್ಣ ಮತ್ತು ದಕ್ಷಿಣಕ್ಕೆ ಸೋಮಣ್ಣರವರು ಇರುತ್ತಾರೆ. ಸದರಿ ಚಕ್ಕುಬಂದಿಯಲ್ಲಿ ವಾದಿ ಅಲ್ಲದೇ ಪ್ರತಿವಾದಿ ಇರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗೂ ನನಗೂ ಆಗದೇ ಇರುವ ಕಾರಣ ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**